# ಸೀರೆ ಸುಂದರಿಯ ದೇಹ ಮೀಮಾಂಸೆ

"ಹೌದು, ನನ್ನ ದೇಹವನ್ನು ನಾನು ತುಂಬಾ ಪ್ರೀತಿಸುತ್ತೇನೆ. ದೇಹದಲ್ಲಿ ಯಾವ ಭಾಗವನ್ನು ಹೆಚ್ಚು ಪ್ರೀತಿಸುತ್ತೀರೆಂದು ನೀವು ಕೇಳಿದರೆ ಹೇಳೋದು ಕಷ್ಟ. ನಾನಂತಲ್ಲ, ನೀವೂ ಪ್ರೀತಿಸುತ್ತೀರಿ.."– ಹೀಗೆಂದು ಬೋಲ್ಡ್ ಆಗಿ ವಿಐಪಿಗಳ ಸಮ್ಮುಖದಲ್ಲಿ ಕುಳಿತು ದೇಹಮೀಮಾಂಸೆಯನ್ನು ಹರಿಯಬಿಟ್ಟ ವಿದ್ಯಾ ಬಾಲನ್‌ಳನ್ನು ನೋಡಿ ಬಾಲಿವುಡ್‌ನ ಇತರ ನಟಿಯರು ಬೆಚ್ಚಿಬಿದ್ದಿದ್ದಾರೆ.



'ನಂಬರ್ ಒನ್' ಓಟದಲ್ಲಿ ಕತ್ರೀನಾ, ಕರೀನಾ, ದೀಪಿಕಾ ಮುಂತಾಗಿ ಯಾರೇ ಮುಂದಿರಲಿ, ಸದ್ಯಕ್ಕಂತೂ ಬಾಲಿವುಡ್‌ನ ಹಾಟ್ ಫೇವರೆಟ್ ನಟಿಯೆಂದರೆ– ಒನ್ ಆ್ಯಂಡ್ ಓನ್ಲೀ ವಿದ್ಯಾ! 'ಪರಿಣೀತಾ' ಎಂಬ ಚಿತ್ರದಲ್ಲಿ ಸಾಂಪ್ರದಾಯಕ ಉಡುಪುಗಳನ್ನು ಧರಿಸಿ ಚಿತ್ರರಸಿಕರಲ್ಲಿ ಪ್ರೇಮಭಾವ ಮೂಡಿಸಿದ ಅದೇ ವಿದ್ಯಾ, 'ಡರ್ಟಿ ಪಿಕ್ಚರ್'ನಲ್ಲಿ ರಸಿಕರ ಕಂಗಳಲ್ಲಿ ಕಾಮದ ಕಿಚ್ಚು ಹಚ್ಚಿದಳು. 'ನೋ ಒನ್ ಕಿಲ್ಡ್ ಜೆಸ್ಸಿಕಾ' ಮತ್ತು 'ಕಹಾನಿ'ಯಲ್ಲಿ ಮನೋಜ್ಞ ಅಭಿನಯದಿಂದ ಅಭಿಮಾನಿಗಳನ್ನು ಬೆಚ್ಚಿಬೀಳಿಸಿದಳು. ಒಂದೊಂದು ಪಾತ್ರದಲ್ಲೂ ವೈವಿಧ್ಯವೇ ಜೀವ ತಳೆದಂತೆ ಅಭಿನಯಿಸುವುದು ವಿದ್ಯಾಗೆ ಕರತಲಾಮಲಕ. ಇನ್ನೇನು..? ಎಂದು ಪ್ರಶ್ನಿಸಿದರೆ, 'ತುಂಬಾ ರೊಮ್ಯಾಂಟಿಕ್ ಆದ ಪಾತ್ರವೊಂದನ್ನು ಮಾಡಬೇಕೆಂಬ ಆಸೆ..' ಎಂದು ಈಗಲೂ ಮುಗಿಯದ ಅಭಿನಯ ದಾಹವನ್ನು ಬಿಚ್ಚಿಡುತ್ತಾಳೆ.

ಇಂತಿರ್ಪ ವಿದ್ಯಾ ಡಿಸೆಂಬರ್ ಮೂರನೇ ವಾರದಲ್ಲಿ ಮದುವೆ ಆಗುವುದು ಖಂಡಿತಾ ಎನ್ನುವ ಸೂಚನೆಗಳು ಅದಾಗಲೇ ಬಹಿರಂಗಗೊಂಡಿವೆ. 2010ರಿಂದಲೇ ಈಕೆ ಯುಟಿವಿ ಮಾಲೀಕ, ಬಾಲಿವುಡ್‌ನ ಪ್ರಮುಖ ನಿರ್ಮಾಪಕ ಸಿದ್ಧಾರ್ಥ್ ರಾಯ್ ಕಪೂರ್ ಜತೆ 'ಕೂಡಿಕೆ ಮಾಡಿಕೊಂಡಿದ್ದಾಳೆ' ಎನ್ನುವವರೂ ಇದ್ದಾರೆ. ಕಳೆದ ವರ್ಷವೇ ಸಿದ್ಧಾರ್ಥ ಮುಂಬೈಯ ಜುಹೂ ಸಮುದ್ರ ತೀರದಲ್ಲಿ 14 ಕೋಟಿ ರೂಪಾಯಿಗೆ ಖರೀದಿಸಿದ ಅಪಾರ್ಟ್‌ಮೆಂಟ್‌ನಲ್ಲೇ ಇಬ್ಬರೂ ವಾಸಿಸುತ್ತಿದ್ದಾರೆ ಎನ್ನುವುದು ಗಪ್‌ಚುಪ್ ಸುದ್ದಿ.

ಅದೇನೇ ಇರಲಿ, ಮದುವೆಗಂತೂ ಸಿದ್ಧತೆಗಳು ಭರದಿಂದ ನಡೆದಿವೆ. ಬಾಲಿವುಡ್‌ನ ಖ್ಯಾತ ಡಿಸೈನರ್ ಸವ್ಯಸಾಚಿ ಮುಖರ್ಜಿಗೆ 18 ಕೈಕಸೂತಿಯ ಸೀರೆಗಳನ್ನು ತಯಾರಿಸಲು ಆರ್ಡರ್ ಹೋಗಿ ಆಗಲೇ 3 ತಿಂಗಳಾಗಿದೆ. ಅದರಲ್ಲಿ ಎರಡು ಮದುಮಗಳ ಸೀರೆಯಂತೆ. ಒಂದಕ್ಕೆ ಮದ್ರಾಸ್ ಸಿಲ್ಕ್ ಅನ್ನು ಸವ್ಯಸಾಚಿಯೇ ಖುದ್ದಾಗಿ ಚೆನ್ನೈಗೆ ಬಂದು ಖರೀದಿಸಿದ್ದಾನಂತೆ. ಡಿಸೆಂಬರ್ 1ಕ್ಕೆ ಹದಿನೆಂಟೂ ಸೀರೆಗಳು ಸಿದ್ಧವಾಗಲಿವೆಯಂತೆ.

ಸದ್ಯಕ್ಕೆ ಸಿದ್ಧಾರ್ಥನೇ ಸಹ ನಿರ್ಮಾಪಕನಾಗಿರುವ 'ಗಣ್ ಚಕ್ಕರ್' ಚಿತ್ರದಲ್ಲಿ ವಿದ್ಯಾ ನಟಿಸುತ್ತಿದ್ದಾಳೆ. ಡಿಸೆಂಬರ್ ಎರಡನೇ ವಾರದಲ್ಲಿ ರಜೆ ಬೇಕೆಂದು ನಿರ್ದೇಶಕರಿಗೆ ಈಗಾಗಲೆ ಸೂಚನೆ ನೀಡಿದ್ದಾಳಂತೆ. 32ರ ಸುಂದರಿ ವಿದ್ಯಾ, 34 ಹ್ಯಾಂಡ್‌ಸಮ್ ನಿರ್ಮಾಪಕನನ್ನು ಮದುವೆಯಾಗುವ ಸಂಭ್ರಮವನ್ನು ನೋಡಲು ಬಾಲಿವುಡ್ ತುದಿಗಾಲಲ್ಲಿ ನಿಂತಿದೆ.



# ಚುಂಬನ ಕಣ್ಮರೆ!



'ಜಬ್ ತಕ್ ಹೈ ಜಾನ್' ಹೇಳಿ ಕೇಳಿ ರೊಮ್ಯಾಂಟಿಕ್ ಸಿನಿಮಾ. ಅದರಲ್ಲೂ ಯಶ್ ಚೋಪ್ರಾ ಬ್ರ್ಯಾಂಡ್ ಅಂದ ಮೇಲೆ ಉತ್ಕಟ ಪ್ರೇಮ ದೃಶ್ಯಗಳು ಸಹಜ. ಶೂಟಿಂಗ್ ವೇಳೆ ಶಾರೂಕ್ ಖಾನ್ ಮತ್ತು ಕತ್ರೀನಾ ಕೈಫ್ ಎರಡು ಚುಂಬನದ ದೃಶ್ಯಗಳಲ್ಲಿ ಪಾಲ್ಗೊಂಡಿದ್ದರಂತೆ. ಒಂದು ಲಂಡನ್ನಿನ ಟ್ರೈನ್ ಸಬ್‌ವೇನಲ್ಲಿ. ಅದು ಅಲ್ಪ ಸಮಯದ್ದು. ಆ ಬಳಿಕದ ದೃಶ್ಯದಲ್ಲಿ ಇನ್ನೊಂದು ದೀರ್ಘ ಚುಂಬನ. ಆರಂಭದಲ್ಲಿ ಇಬ್ಬರೂ ಚುಂಬನದ ದೃಶ್ಯ ಬೇಡ ಎಂದು ಹಠ ಹಿಡಿದರಂತೆ. ಚೋಪ್ರಾಜೀ ಈ ದೃಶ್ಯಗಳ ಅಗತ್ಯವನ್ನು ಮನವರಿಕೆ ಮಾಡಿದ ಬಳಿಕ ಇಬ್ಬರೂ ಒಪ್ಪಿದರಂತೆ.

ಮುಂಬೈಯಲ್ಲಿ ಮೊದಲ ದಿನ ಸಿನಿಮಾದ ಪ್ರೀಮಿಯರ್ ಷೋ ನೋಡಿದ ಕೆಲವು ಗಣ್ಯರು 'ದೀರ್ಘ ಚುಂಬನದ ದೃಶ್ಯ ರೋಮಾಂಚಕವಾಗಿದೆ' ಎಂದಿದ್ದರು. ಆದರೆ ಬಿಡುಗಡೆಯಾಗಿರುವ ಸಿನಿಮಾದಲ್ಲಿ ಈಗ ಆ ದೃಶ್ಯ ಕೇವಲ 2–3 ಸೆಕೆಂಡುಗಳಷ್ಟೇ ಉಳಿದುಕೊಂಡಿದೆ! ಹೀಗೆ ದೀರ್ಘ ಚುಂಬನ ಕಣ್ಮರೆಯಾಗಲು ಶಾರೂಕ್ ಖಾನ್ ಅವತ್ತೇ ರಾತ್ರಿ ಆದಿತ್ಯ ಚೋಪ್ರಾಗೆ ಫೋನ್ ಮಾಡಿ ಹೇಳಿದ್ದೇ ಕಾರಣವಂತೆ!

■ ಬಿಂದು